₹ 10
ಸಂಪುಟ: 3 ಸಂಚಿಕೆ: 131 ಪುಟಗಳು: 16+8
16.05.2018 ಬುಧವಾರ
ಬೆಂಗಳೂರು । ಹುಬ್ಬಳ್ಳಿ । ಮಂಗಳೂರು
ದಾವಣಗೆರೆ । ಕಲಬುರಗಿ । ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ದಾರಿದೀಪೋಕ್ತಿ
ಬೇರೆಯವರನ್ನು ಅಣಕಿಸುವುದರಲ್ಲಿ ಗೆಲ್ಲುವುದಕ್ಕಿಂತ ನಮ್ಮ ಮೂಲಗುಣದಲ್ಲಿ ರಾಜಿಮಾಡಿಕೊಳ್ಳದೇ ಸೋಲುವುದೇ ವಾಸಿ. ಮೂಲಗುಣ ಕಳೆದುಕೊಂಡರೆ, ನಮ್ಮ ಅಸ್ತಿತ್ವ ಕಳೆದುಕೊಂಡಂತೆ.

ವಕ್ರತುಂಡೋಕ್ತಿ
ರಾಜಕೀಯದಲ್ಲಿ ಯಾರೂ ಶಾಶ್ವತ ಮಿತ್ರರೂ ಇಲ್ಲ, ಶತ್ರುಗಳೂ ಇಲ್ಲ, ಅಧಿಕಾರವೂ ಶಾಶ್ವತ ಅಲ್ಲ.

# ವಿಶ್ವವಾಣಿ
ವಿಶ್ವಾಸವೇ ವಿಶ್ವ



**ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಚಾಮುಂಡೇಶ್ವರಿಯಲ್ಲಿ ಹೀನಾಯ ಸೋಲು, ಬಾದಾಮಿಯಲ್ಲಿ ಪ್ರಯಾಸದ ಗೆಲುವು | ಎರಡೂ ಕಡೆ ಗೆದ್ದ ಕುಮಾರಸ್ವಾಮಿ, ಸರಕಾರದ ಸಾರಥ್ಯವಹಿಸಲು ಬಯಸದೇ ಬಂದ ಭಾಗ್ಯ | ಡಜನ್ ಸಚಿವರು, 25 ಕ್ಕೂ ಹೆಚ್ಚು ಶಾಸಕರಿಗೆ ಸೋಲು**

**ಅತಿ ದೊಡ್ಡ ಪಕ್ಷ ಬಿಜೆಪಿ, ಕಾಂಗ್ರೆಸ್-ಜೆಡಿಎಸ್ ಮೈತ್ರಿಕೂಟದಿಂದ ಸರಕಾರ ರಚನೆಗೆ ಹಕ್ಕು ಪ್ರತಿಪಾದನೆ | ರಾಜ್ಯಪಾಲರ ಅಂಗಳದಲ್ಲಿ ಚೆಂಡು**

# ಬಿಜೆಪಿಗೆ ಜನಮತ
# ಕಾಂಗ್ರೆಸ್+ಜೆಡಿಎಸ್‌ಗೆ ಬಹುಮತ

## ನಾಯಕರು ಹೇಳಿದೇನು?

ಮಹಾರಾಷ್ಟ್ರ, ಗೋವಾ, ಅಸ್ಸಾಂ, ಈಶಾನ್ಯ ರಾಜ್ಯಗಳು ಹಿಂದಿ ಭಾಷಿಗರ ರಾಜ್ಯಗಳೇ? ಅಲ್ಲಿನ ಜನರು ನಮ್ಮನ್ನು ಸ್ವೀಕರಿಸಿಲ್ಲವೇ? ಚುನಾವಣೆ ಗೆಲ್ಲಲು ತಮ್ಮನ್ನು ಹೊರಗಿನವರು ಎಂದು ಅಪಪ್ರಚಾರ ಮಾಡಲಾಗಿತ್ತು. ಆದರೆ ಕರ್ನಾಟಕದ ಜನರು ಭಾಷೆಯ ಅಂತರವನ್ನು ಮರೆತು ನನಗೆ ಪ್ರೀತಿ ತೋರಿದರು.



**-ನರೇಂದ್ರ ಮೋದಿ**
ಪ್ರಧಾನಮಂತ್ರಿ

ಕಾಂಗ್ರೆಸ್ ಸರಕಾರ ಚುನಾವಣೆಯಲ್ಲಿ ಹಣ, ಜನಬಲವನ್ನು ಅತಿಯಾಗಿ ಬಳಸಿತ್ತು. ನಕಲಿ ಮತದಾರರ ಗುರುತಿನ ಚೀಟಿ ಮೂಲಕ ಅಕ್ರಮಕ್ಕೆ ಮುಂದಾಗಿತ್ತು. ಆದರೂ ಅವರ ತಂತ್ರಗಳು ಫಲ ನೀಡಲಿಲ್ಲ. ಬಿಜೆಪಿಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜಯ ಸಿಕ್ಕಿದೆ. ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.



**-ಅಮಿತ್ ಶಾ**
ಬಿಜೆಪಿ ರಾಷ್ಟ್ರಾಧ್ಯಕ್ಷ

ಕರ್ನಾಟಕದಲ್ಲಿ ಕಾಂಗ್ರೆಸ್ ಪರ ಮತ ಚಲಾಯಿಸಿದ ಎಲ್ಲರಿಗೂ ಧನ್ಯವಾದ, ನಿಮ್ಮ ಬೆಂಬಲಕ್ಕೆ ಕಾಂಗ್ರೆಸ್ ಪಕ್ಷ ಋಣಿಯಾಗಿದೆ. ಪಕ್ಷದ ಪರ ಶ್ರಮಿಸಿದ ಮುಖಂಡರು ಹಾಗೂ ಕಾರ್ಯಕರ್ತರಿಗೆ ನಾನು ಅಭಾರಿ.



**-ರಾಹುಲ್ ಗಾಂಧಿ**
ಎಐಸಿಸಿ ಅಧ್ಯಕ್ಷ

ರಾಜ್ಯದ ಜನತೆ ಸಿದ್ದರಾಮಯ್ಯ ಸರಕಾರವನ್ನು ತಿರಸ್ಕರಿಸಿ, ಬಿಜೆಪಿಗೆ ಬಹುಮತ ನೀಡಿದ್ದಾರೆ. ಆದರೆ, ಕಾಂಗ್ರೆಸ್‌ನವರು ಹಿಂಬಾಗಿಲಿನಿಂದ ಅಧಿಕಾರ ಹಿಡಿಯಲು ಹವಣಿಸುತ್ತಿದ್ದಾರೆ. ಮೈತ್ರಿ ಕುರಿತು ಪಕ್ಷದ ವರಿಷ್ಠರ ಜತೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು.



**-ಬಿ.ಎಸ್.ಯಡಿಯೂರಪ್ಪ**
ಬಿಜೆಪಿ ರಾಜ್ಯಾಧ್ಯಕ್ಷ

ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲ ಆಧಾರದ ಮೇಲೆ ಸರಕಾರ ರಚನೆಗೆ ರಾಜ್ಯಪಾಲರು ಅವಕಾಶ ನೀಡುತ್ತಾರೆ. ನಮ್ಮ ಸಂಖ್ಯಾಬಲ ಹೆಚ್ಚಿದೆ. ಕಾಂಗ್ರೆಸ್ 78, ಜೆಡಿಎಸ್ 38 ಸೇರಿ ಒಟ್ಟು 116 ಸ್ಥಾನ ಪಡೆದಿದ್ದೇವೆ. ರಾಜ್ಯಪಾಲರು ಸರಕಾರ ರಚನೆಗೆ ಒಪ್ಪಿಗೆ ನೀಡುವ ವಿಶ್ವಾಸವಿದೆ.



**-ಸಿದ್ದರಾಮಯ್ಯ**
ನಿರ್ಗಮಿತ ಮುಖ್ಯಮಂತ್ರಿ

ಕಾಂಗ್ರೆಸ್ ಬೆಂಬಲದೊಂದಿಗೆ ಸರಕಾರ ರಚಿಸಲು ಎರಡು ಪಕ್ಷಗಳು ರಾಜ್ಯಪಾಲರಲ್ಲಿ ಅನುಮತಿ ಕೋರಿದ್ದೇವೆ. ಚುನಾವಣಾ ಆಯೋಗದಿಂದ ಯಾವ-ಯಾವ ಪಕ್ಷಗಳಿಗೆ ಎಷ್ಟೆಷ್ಟು ಮತಗಳು ಬಂದಿದೆ ಎಂದು ಗಮನಿಸಿ ನಿರ್ಧಾರಿಸಲಾಗುವುದು ಎಂದಿದ್ದಾರೆ.



**- ಎಚ್.ಡಿ ಕುಮಾರಸ್ವಾಮಿ**
ಜೆಡಿಎಸ್ ರಾಜ್ಯಾಧ್ಯಕ್ಷ

ಕಾಂಗ್ರೆಸ್‌ನಿಂದ ಜೆಡಿಎಸ್‌ಗೆ ಬೆಂಬಲ ಸೂಚಿಸುವ ಮೂಲಕ ಸರಕಾರ ರಚಿಸಲು ಈಗಾಗಲೇ ರಾಜ್ಯಪಾಲರಿಗೆ ಮನವಿ ಮಾಡಲಾಗಿದೆ. ರಾಜ್ಯಪಾಲರ ನಡೆ ಏನೆಂಬುದನ್ನು ನೋಡಲಾಗುವುದು. ಸದ್ಯ ಜೆಡಿಎಸ್‌ಗೆ ಬೆಂಬಲ ಸೂಚಿಸಿದ್ದೇವೆ.



**-ಡಾ. ಜಿ. ಪರಮೇಶ್ವರ,**
ಕೆಪಿಸಿಸಿ ಅಧ್ಯಕ್ಷ







ಮತ ಪ್ರಮಾಣ

| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ | ಇತರೆ |
|---|---|---|---|
| 38% | 36.2% | 18.4% | 7.4% |

| | ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ | ಇತರೆ |
|---|---|---|---|---|
| ಏರಿಳಿತ | - 44 | + 54 | - 2 | - 10 |

## ಸಾಧ್ಯಾಸಾಧ್ಯತೆಗಳು

### ರಾಜ್ಯಪಾಲರ ಅಂಗಳದಲ್ಲಿ ಚೆಂಡು

1 ಅತಂತ್ರ ವಿಧಾನಸಭೆ ನಿರ್ಮಾಣದ ಹಿನ್ನೆಲೆಯಲ್ಲಿ ರಾಜ್ಯದ ಆಡಳಿತದ ಚೆಂಡು ಈಗ ರಾಜ್ಯಪಾಲ ವಜೂಭಾಯಿ ರೂಢಾಬಾಯಿ ವಾಲಾರ ಕೈಲಿದೆ.

2 ರಾಜ್ಯಪಾಲರು ಸಂಪ್ರದಾಯದಂತೆ ಅತಿ ದೊಡ್ಡ ಪಕ್ಷ ಬಿಜೆಪಿಗೆ ಸರಕಾರ ರಚನೆ ಮಾಡುವಂತೆ ಮೊದಲು ಅವಕಾಶ ನೀಡಿ ಬಹುಮತ ಸಾಬೀತಿಗೆ ಸೂಚನೆ ನೀಡಬಹುದು.

3 ಬಹುಮತ ಸಾಬೀತಿನವರೆಗೆ ಕಾಯ್ದು ಅದು ಬಿಜೆಪಿಯಿಂದ ಸಾಧ್ಯವಾಗದಿದ್ದರೆ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಕಾಂಗ್ರೆಸ್ ನಿಯೋಗ ನೀಡಿರುವ ಮನವಿ ಪರಿಗಣನೆ.

4 ಒಂದು ವೇಳೆ ಶಾಸಕರ ಖರೀದಿ ಅಥವಾ ಕುದುರೆ ವ್ಯಾಪಾರ ನಡೆಯುತ್ತಿದೆ ಎಂಬ ದೂರುಗಳು ಬಂದಲ್ಲಿ ರಾಜ್ಯಪಾಲರು ವಿಧಾನ ಸಭೆಯನ್ನು ಅಮಾನತಿ ನಲ್ಲಿಡಬಹುದು.

### ಬಿಜೆಪಿ ಮುಂದಿರುವ ಅವಕಾಶಗಳು

1 ರಾಜ್ಯಪಾಲರನ್ನು ಭೇಟಿ ಮಾಡಿ ಸರಕಾರ ರಚನೆಗೆ ಒಂದು ವಾರದ ಕಾಲಾವಕಾಶ ಕೇಳಿದ್ದು, ಬಹುಮತಕ್ಕೆ ಶಾಸಕರನ್ನು ಒಗ್ಗೂಡಿಸುವ ತಂತ್ರ ಹೆಣೆಯಬಹುದು.

2 ಮೊದಲು ಯಡಿಯೂರಪ್ಪ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿ ಬಹುಮತಕ್ಕೆ ಸಿಗುವ ಕಾಲಾವಕಾಶದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಕೆಲವು ಶಾಸಕರನ್ನು ತನ್ನತ್ತ ಸೆಳೆದುಕೊಳ್ಳಬಹುದು.

3 ಇಲ್ಲವೇ ಎರಡೂ ಪಕ್ಷಗಳ 8-15 ಶಾಸಕರ ರಾಜೀನಾಮೆ ಕೊಡಿಸಿದರೆ ಆಗ ವಿಧಾನಸಭೆ ಬಲ 207 ಆಗುತ್ತದೆ. ಇದರ ಆಧಾರದಲ್ಲಿ 104 ಸ್ಥಾನಗಳು ಸರಳ ಬಹುಮತಕ್ಕೆ ಸಾಕಾಗುತ್ತವೆ.

4 ಕಡೆಯ ಅವಕಾಶವಾಗಿ ಜೆಡಿಎಸ್‌ಗೆ ಸಿಎಂ ಸ್ಥಾನ ಬಿಟ್ಟುಕೊಟ್ಟು ಅಧಿಕಾರದ ಗದ್ದುಗೆಗೆ ಮುಂದಾಗಬಹುದು.

### ಕಾಂಗ್ರೆಸ್/ಜೆಡಿಎಸ್ ಮೈತ್ರಿಕೂಟ

1 ಕಾಂಗ್ರೆಸ್ ದೊಡ್ಡ ಪಕ್ಷವಾಗಿದ್ದರೂ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಲೆಂದೇ ಜೆಡಿಎಸ್‌ನ ಎಲ್ಲ ಷರತ್ತುಗಳನ್ನು ಒಪ್ಪಿಕೊಳ್ಳುವ ಅನಿವಾರ್ಯತೆ.

2 ಬಯಸದೇ ಬಂದಿರುವ ಅಧಿಕಾರದ ಭಾಗ್ಯವನ್ನು ಬಳಸಿಕೊಂಡು ಜೆಡಿಎಸ್ ಸಿಎಂ ಸೇರಿದಂತೆ ಪ್ರಮುಖ ಖಾತೆಗಳನ್ನು ತಾನೇ ಇಟ್ಟುಕೊಂಡು ಮೇಲುಗೈ ಸಾಧಿಸಬಹುದು.

3 ಬಿಜೆಪಿ ಅಧಿಕಾರಕ್ಕೆ ಬರಲು ನಡೆಸುವ ತಂತ್ರಗಳನ್ನು ಹುಸಿಗೊಳಿಸಲು ಈ ಮೈತ್ರಿಕೂಟದ ಶಾಸಕರನ್ನು ರಾಜ್ಯದಿಂದ ಹೊರಗೆ ಕರೆದೊಯ್ದು ಕಾಪಿಟ್ಟುಕೊಳ್ಳಬಹುದು.

4 ಆಪರೇಷನ್ ಕಮಲಕ್ಕೆ ಮುಂದಾದರೆ ಬಿಜೆಪಿಯ ಶಾಸಕರನ್ನೇ ಹೈಜಾಕ್ ಮಾಡಲು ರಣತಂತ್ರ ಹೆಣೆಯಬಹುದು.

**ಅಖಂಡ ಶ್ರೀನಿವಾಸಮೂರ್ತಿಗೆ ಪುಲಿಕೇಶಿ ನಗರದಲ್ಲಿ 81,623 ಮತಗಳ ಭಾರಿ ಅಂತರದ ಗೆಲುವು.**

**ದೇವರ ಹಿಪ್ಪರಗಿಯಲ್ಲಿ ಬಿಜೆಪಿಯ ಸೋಮನಗೌಡ ಪಾಟೀಲ್‌ಗೆ 90 ಮತಗಳ ಅಲ್ಪ ಅಂತರದ ಜಯ**

**ಸರಕಾರ ರಚನೆಗೆ ತುದಿಗಾಲಲ್ಲಿ ನಿಂತಿರುವ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕಾಂಗ ಸಭೆ ಇಂದು**

**ಕುದುರೆ ವ್ಯಾಪಾರಕ್ಕೆ ಮೂರೂ ಪಕ್ಷಗಳ ಕಸರತ್ತು, ಮತ್ತೆ ಆರಂಭವಾಯ್ತು ರೆಸಾರ್ಟ್ ರಾಜಕೀಯ**

**ಜೆಡಿಎಸ್-ಕಾಂಗ್ರೆಸ್ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಪಂಜಾಬ್ ಅಥವಾ ಆಂಧ್ರಕ್ಕೆ ಕಳುಹಿಸಲು ಚಿಂತನೆ**

**ಲಿಂಗಾಯತಾಸ್ತ್ರ ಪ್ರಯೋಗಿಸಲು ಬಿಜೆಪಿ ಹುನ್ನಾರ, ಕೆಲವು ಶಾಸಕರಿಗೆ ಈಗಾಗಲೇ ಗಾಳ**

## ರಾಜ್ಯಪಾಲರ ಆದ್ಯತೆ ಬಿಜೆಪಿಯೇ..!

● ಪಿ. ತ್ಯಾಗರಾಜ್

ಜಾತಿ ಸಮೀಕರಣದ ಹೊಡೆತಕ್ಕೆ ಸಿಕ್ಕು ಅತಂತ್ರ ವಿಧಾನಸಭೆ ಅಸ್ತಿತ್ವಕ್ಕೆ ಸಾಕ್ಷಿ ಆಗಿರುವ ಕರ್ನಾಟಕದಲ್ಲೀಗ ಸರಕಾರ ರಚನೆ ಪ್ರಕ್ರಿಯೆ ರಾಜ್ಯಪಾಲರ ಅಣತಿ ಮೇಲೆ ಅವಲಂಬಿತ. ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಸ್ಪಷ್ಟ ಬಹುಮತದ ಹೊಸ್ತಿಲಲ್ಲಿ ಮುಗ್ಗರಿಸಿರುವ ಬಿಜೆಪಿ ಅಧಿಕಾರದ ಕನಸು ಈಡೇರಿಸಿಕೊಳ್ಳಲು 'ಆಪರೇಷನ್ ಕಮಲ' ಹಾಗೂ ತನ್ನದೇ ಪಕ್ಷ ಮೂಲದ ರಾಜ್ಯಪಾಲ ವಜುಭಾಯಿ ವಾಲಾ ರಕ್ಷೆ ನಿರೀಕ್ಷೆಯಲ್ಲಿದೆ.

ಇದನ್ನು ಸಾಕಷ್ಟು ಮೊದಲೇ ಗ್ರಹಿಸಿರುವ ಕಾಂಗ್ರೆಸ್ ಹಾಗೂ ಜೆಡಿಎಸ್ ಹಳೇ ವೈರ ಪಕ್ಕಕ್ಕಿಟ್ಟು ಏರ್ಪಡಿಸಿಕೊಂಡಿರುವ ಹಠಾತ್ ಮೈತ್ರಿಕೂಟ ಚಿಮ್ಮಿಸಿರುವ ಸ್ಪಷ್ಟ ಬಹುಮತ ಮುಂದಿಟ್ಟು ತಮಗೇ ಸರಕಾರ ರಚನೆ ಅವಕಾಶ ಕೊಡಬೇಕೆಂಬ ಪ್ರತಿಪಾದನೆಯನ್ನು ಅದೇ ರಾಜ್ಯಪಾಲರ ಮುಂದಿಟ್ಟಿದೆ. ಕರ್ನಾಟಕಕ್ಕೆ ತನ್ನನ್ನು ನಿಯೋಜಿಸಿರುವ ದಿಲ್ಲಿ ದರ್ಬಾರಿನ ಸೂಚನೆಯಂತೆ ವಜುಬಾಯಿ ವಾಲಾ ಅವರು ಬಿಜೆಪಿ ಶಾಸಕಾಂಗ ನಾಯಕನಾಗಿ ಆಯ್ಕೆಯಾಗಲಿರುವ ಬಿ.ಎಸ್. ಯಡಿಯೂರಪ್ಪ ಅವರಿಗೇ ಮೊದಲು ಸರಕಾರ ರಚನೆ ಅವಕಾಶ ದಯಪಾಲಿಸುವ ಸಾಧ್ಯತೆಗಳಿವೆ.

ರಾಷ್ಟ್ರ ರಾಜಕಾರಣ ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ಸ್ವಲ್ಪವೂ ತಡಮಾಡದೇ ಜೆಡಿಎಸ್ ಜತೆ ಮೈತ್ರಿ ಏರ್ಪಡಿಸಿಕೊಂಡಿದೆಯಲ್ಲದೆ ಕುಮಾರಸ್ವಾಮಿ ಅವರಿಗೆ ಮುಖ್ಯಮಂತ್ರಿ ಪಟ್ಟ ಬಿಟ್ಟುಕೊಡಲು ನಿರ್ಣಯಿಸಿದೆ. ಸಿದ್ದರಾಮಯ್ಯ ಮತ್ತು ದೇವೇಗೌಡರು ಬೀದಿಯಲ್ಲಿ ನಡೆಸಿದ 'ಲಡಾಯಿ' ಅಧಿಕಾರದ ಮುಂದೆ ನಲುಗಿ ಮಲಗಿದೆ. ಕಾಂಗ್ರೆಸ್ ಮುಕ್ತ ಭಾರತವನ್ನಾಗಿ ಮಾಡಲು ಹೊರಟಿರುವ ಬಿಜೆಪಿಯ ಸಂಕಲ್ಪ ಈಡೇರಿಕೆಗೆ ಕರ್ನಾಟಕ ಪ್ರತಿಷ್ಠಿತ ರಾಜ್ಯ. ಅದೇ ರೀತಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಕರ್ನಾಟಕವನ್ನಾದರೂ ಬಿಜೆಪಿಮುಕ್ತ ಮಾಡುವುದು ಕಾಂಗ್ರೆಸ್ ಹಾಗೂ ಜೆಡಿಎಸ್ಸಿಗೂ ಅನಿವಾರ್ಯ. ಹೀಗಾಗಿ ಮತ್ತೊಬ್ಬರ ಅವನತಿಯಲ್ಲಿ ತಮ್ಮ ಉನ್ನತಿ ಅರಸುತ್ತಿರುವ ಪರಸ್ಪರರು ರಾಜಕೀಯ ಸಾವು-ಬದುಕಿನ ಹೋರಾಟ ನಡೆಸುತ್ತಿದ್ದಾರೆ. ಹೀಗಾಗಿ ಅಧಿಕಾರದ ಗುಂಗು ರಾಜಕೀಯ ರಂಗನ್ನು ಮತ್ತಷ್ಟು ಕಡು ಮಾಡಿಟ್ಟಿದೆ.

ಬಹುತೇಕ ಮತಗಟ್ಟೆ ಸಮೀಕ್ಷೆಗಳು ಪ್ರತಿಪಾದಿಸಿದ್ದ ಅತಂತ್ರ ವಿಧಾನಸಭೆಯನ್ನು ಭಿನ್ನ ರೀತಿಯಲ್ಲಿ ಮಂಡಿಸಿರುವ ಮತದಾರ ರಾಜಕೀಯ ಪಕ್ಷಗಳು ಅಧಿಕಾರ ಬಯಕೆ ಈಡೇರಿಸಿಕೊಳ್ಳಲು ಸಾಕಷ್ಟು ಬೆವರು ಹರಿಸುವಂತೆ ಮಾಡಿಟ್ಟಿದ್ದಾನೆ. ಪ್ರಧಾನಿ ಮೋದಿ ಮತ್ತು ಬಿಜೆಪಿ ಚಾಣಕ್ಯ ಅಮಿತ್ ಶಾ ಜೋಡಿಯ ಮೋಡಿ ನಡುವೆಯೂ ಸ್ಪಷ್ಟ ಬಹುಮತಕ್ಕೆ ತಿಣುಕಾಡಿರುವ ಬಿಜೆಪಿ ತನ್ನ ಕೈ ಹಿಡಿದಿರುವ ಲಿಂಗಾಯತ ದಾಳವನ್ನೇ ಅನ್ಯಪಕ್ಷಗಳ ಪಾಳೆಯದಲ್ಲಿ ಉರುಳಿಸಿ ಗದ್ದುಗೆ ಹಿಡಿಯಲು ತಂತ್ರ ರೂಪಿಸಿದೆ. ಇದಕ್ಕೆ ಪರ್ಯಾಯವಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕರ ಒಗ್ಗಟ್ಟು ಕಾಯ್ದಿಟ್ಟುಕೊಳ್ಳುವ ಸಂಕಲ್ಪಕ್ಕೆ ಬಿದ್ದಿರುವ ಕುಮಾರಸ್ವಾಮಿ ಹಾಗೂ ಡಿ.ಕೆ. ಶಿವಕುಮಾರ್ ಜೋಡಿ ಬಿಜೆಪಿ ಅಸ್ತ್ರಕ್ಕೆ ಪ್ರತ್ಯಸ್ತ್ರ ರೂಪಿಸುತ್ತಿದ್ದಾರೆ.

ಏಕಾಂಗಿಯಾಗಿ ಅಧಿಕಾರಕ್ಕೆ ಬರುತ್ತೇವೆಂದು ಬೀಗುತ್ತಿದ್ದ ಬಿಜೆಪಿ 104, ಕಾಂಗ್ರೆಸ್ 78 ಹಾಗೂ ಜೆಡಿಎಸ್ 38 ಸ್ಥಾನಗಳನ್ನಷ್ಟೇ ಗಳಿಸಲು ಸಾಧ್ಯವಾಗಿದೆ. ಇದರ ಜತೆಗೆ ಕೆಪಿಜೆಪಿಯ ಒಬ್ಬರು ಹಾಗೂ ಪಕ್ಷೇತರರೊಬ್ಬರು ಈ ಡೋಲಾಯಮಾನ ಸ್ಥಿತಿಯ 'ಸದ್ಬಳಕೆ'ಗೆ ಸಜ್ಜಾಗಿದ್ದಾರೆ. ಒಂದು ಕಡೆ ಪ್ರತ್ಯೇಕ ಧರ್ಮ ರಚನೆಯಿಂದ ಲಿಂಗಾಯತರ ಕೋಪ, ಒಕ್ಕಲಿಗರ ವಿರೋಧ ಕಟ್ಟಿಕೊಂಡ ಸಿದ್ದರಾಮಯ್ಯನವರು ಮತ್ತೊಂದೆಡೆ ಅಹಿಂದ ಮತಗಳನ್ನು ಹಿಡಿದಿಟ್ಟುಕೊಳ್ಳುವಲ್ಲಿಯೂ ವಿಫಲರಾದದ್ದು ವೈಯಕ್ತಿಕವಾಗಿ ಅವರಿಗೆ ಹಾಗೂ ಪಕ್ಷವಾಗಿ ಕಾಂಗ್ರೆಸ್ಸಿಗೆ ಬಹಳ ದುಬಾರಿಯಾಗಿದೆ. ಸ್ವಕ್ಷೇತ್ರ ಚಾಮುಂಡೇಶ್ವರಿಯಲ್ಲಿ ಸೋತು ಮುಖಭಂಗ ಅನುಭವಿಸಿರುವ ಸಿದ್ದರಾಮಯ್ಯನವರ ಮರ್ಯಾದೆಯನ್ನು ಬಾದಾಮಿ ಮತದಾರರು ಕಾಪಾಡಿದ್ದಾರೆ. ಆದರೆ, ಕಾಂಗ್ರೆಸ್ ಕುಸಿತದಲ್ಲಿ ಅವರ ಗರ್ವಭಂಗವಾಗಿದೆ.

→ 11

## ಸರಕಾರ ರಚನೆಗೆ ಕಸರತ್ತು

ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಳ್ಳುವ ವಿಚಾರ ಗೊತ್ತಾಗುತ್ತದ್ದಂತೆ ಬಿಜೆಪಿ ನಾಯಕರು ಎಚ್ಚೆತ್ತುಕೊಂಡು ಸಭೆ ನಡೆಸಿದರು. ದೆಹಲಿಯಿಂದ ರಾಷ್ಟ್ರೀಯ ನಾಯಕರು ಮೂವರ ತಂಡವನ್ನು ರಾಜ್ಯಕ್ಕೆ ಕಳುಸಹಿದ್ದು, ಮುರುಳೀಧರ್ ರಾವ್ ನೇತೃತ್ವದಲ್ಲಿ ಬಿಜೆಪಿ ಕಚೇರಿಯಲ್ಲಿ ಸಭೆ ನಡೆಸಿ ಸರಕಾರ ರಚನೆಗೆ ಇರುವ ದಾರಿಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಸರಕಾರ ರಚನೆ ಕೈತಪ್ಪಬಾರದು ಎಂಬ ತೀರ್ಮಾನಕ್ಕೆ ಬರಲಾಯಿತು.

## ಸಿದ್ದರಾಮಯ್ಯ ರಾಜೀನಾಮೆ



ಚುನಾವಣೆ ಫಲಿತಾಂಶ ಹೊರ ಬೀಳುತ್ತಿದ್ದಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಜೆ ರಾಜಭವನಕ್ಕೆ ತೆರಳಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

## ಜೆಡಿಎಸ್ ಮೈತ್ರಿಗೆ ನಿಶಾನೆ

ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳುವ ಪಕ್ಷದ ತೀರ್ಮಾನದ ಕುರಿತು ಪಕ್ಷದ ಶಾಸಕರು ಮತ್ತು ಮುಖಂಡರ ಜತೆಗೆ ವೇಣುಗೋಪಾಲ್ ನೇತೃತ್ವದಲ್ಲಿ ಸಭೆ ನಡೆಯಿತು. ಬಿಜೆಪಿಯನ್ನು ಅಧಿಕಾರದಿಂದ ದೂರು ಇಡುವ ನಿಟ್ಟನಲ್ಲಿ ಜೆಡಿಎಸ್‌ಗೆ ಬೆಂಬಲ ನೀಡುವ ಮತ್ತು ಮುಖ್ಯಮಂತ್ರಿ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟು ಉಪಮುಖ್ಯಮಂತ್ರಿ ಸ್ಥಾನ ಸೇರಿ 20 ಸಚಿವ ಸ್ಥಾನಗಳನ್ನು ಉಳಿಸಿಕೊಳ್ಳುವ ತೀರ್ಮಾನ ಕೈಗೊಳ್ಳಲಾಯಿತು.

## ಕಾಂಗ್ರೆಸ್ ಬೆಂಬಲಕ್ಕೆ ಒಕೆ

ಸರಕಾರ ರಚನೆಗೆ ಕಾಂಗ್ರೆಸ್ ಬೆಂಬಲ ನೀಡಿದ ಹಿನ್ನೆಲೆಯಲ್ಲಿ ಪದ್ಮನಾಭನಗರದ ವರಿಷ್ಠ ದೇವೇಗೌಡರ ನಿವಾಸದಲ್ಲಿ ಜೆಡಿಎಸ್ ಶಾಸಕರ ಸಭೆ ನಡೆಯಿತು. ಸಭೆಯಲ್ಲಿ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಚರ್ಚೆ ನಡೆಸಲಾಯಿತು. ಎಲ್ಲ ಶಾಸಕರು ಪಕ್ಷದ ನಿರ್ಧಾರಕ್ಕೆ ಬದ್ಧವಾಗಿರುವ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು. ಸಭೆಯ ತೀರ್ಮಾನದಂತೆ ರಾಜಭವನಕ್ಕೆ ತೆರಳಿ ಸರಕಾರ ರಚನೆಯ ಹಕ್ಕುಮಂಡನೆ ಮಾಡಲಾಯಿತು.